**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1419 (1313) |
| ಸದಸ್ಯರ ಹೆಸರು | : | ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 18.12.2025 |
| ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನ ಸಂಸ್ಥೆಯ ಉಳಿತಾಯ ಖಾತೆಯಲ್ಲಿದ್ದು 6 ಕೋಟಿ 95 ಲಕ್ಷ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಯ ಆಧಾರದ ವೇಳೆ ಖರ್ಚು ಮಾಡಲಾಗಿದೆಯೇ: ಮಾಡಿದ್ದಲ್ಲಿ ಸದರಿ ಅನುದಾನದಿಂದ ಕೈಗೊಂಡ ಕಾರ್ಯಗಳಾವುವು: (ಸಂಪೂರ್ಣ ಮಾಹಿತಿ ನೀಡುವುದು) ಮತ್ತು ಅನುದಾನ ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕು ಎಂದು ಮಾಡಿರುವ ಕ್ರಿಯಾ ಯೋಜನೆಯಾಗಿದೆ: (ಪ್ರತಿಯನ್ನು ಲಗತ್ತಿಸುವುದು) | ಸರ್ಕಾರದ ಆದೇಶ ಸಂಖ್ಯೆ: STW/SECB/STP/281/2024, ದಿನಾಂಕ:20.03.2025 ರಂತೆ ರೂ.690 ಲಕ್ಷಗಳ ಪರಿಷ್ಕೃತ ಕ್ರಿಯಾಯೋಜನೆಯನ್ವಯ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ಅನುಷ್ಠಾನಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಕ್ರಿಯಾಯೋಜನೆಯ ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಸದರಿ ಸಂಸ್ಥೆಗೆ ಸಂಶೋಧನೆ ಹಿನ್ನಲೆಯ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಬೇಕು ಎಂಬ ನಿಯಮವಿರುವುದು ನಿಜವೇ: ನಿಯಮವಿದ್ದಲ್ಲಿ ಸುಮಾರು 3 ವರ್ಷಗಳಿಂದಲೂ ಕೂಡ ಪ್ರಭಾರ ನಿರ್ದೇಶಕರ ನೇಮಕ ಮಾಡಿಕೊಂಡಿರುವುದಕ್ಕೆ ಕಾರಣಗಳೇನು: | ಮಾನ್ಯ ಉಚ್ಚ ನ್ಯಾಯಾಲಯದ W.P. No. 105281/2024 ಪ್ರಕರಣದಲ್ಲಿ ನಿರ್ದೇಶಕರ ಹುದ್ದೆ ನೇಮಕಾತಿಯ ಕುರಿತು ತಡೆಯಾಜ್ಞೆ ಇರುವುದರಿಂದ, ಆಡಳಿತಾತ್ಮಕ ಹಿತದೃಷ್ಟಿಯಿಂದ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ನೇಮಿಸಲಾಗಿರುತ್ತದೆ. |
| ಇ) | ಖಾಯಂ ನಿರ್ದೇಶಕರನ್ನು ನೇಮಕ ಮಾಡದೇ ಇದ್ದಿದ್ದರಿಂದ ರಾಜ್ಯದಲ್ಲಿರುವ ಬುಡಕಟ್ಟು ಸಮುದಾಯಗಳ ಅಧ್ಯಯನಕ್ಕೆ ಮತ್ತು ಅಭಿವೃದ್ಧಿಗೆ ತೊಡಕುಂಟಾಗಿರುವುದರಿಂದ ಆಧ್ಯತೆಯ ಮೇರೆಗೆ ನಿರ್ದೇಶಕರನ್ನು ನೇಮಕ ಮಾಡಲು ಸರ್ಕಾರದ ಮುಂದಿನ ಕ್ರಮಗಳೇನು ತಿಳಿಸುವುದು? | |

STW/SECB/SAD/149/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ರಾಜ್ಯಾದ್ಯಂತ ಅರಿವು ಮೂಡಿಸುವ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ಪತ್ರ ಸಂಖ್ಯೆ:ಟಿಆರ್ಐ/ಮೈ/ಸಿಆರ್/2023-24. ದಿನಾಂಕ:21.07.2023 ಮತ್ತು 07.09.2023

*****

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕೇಂದ್ರದಲ್ಲಿ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಸಲ್ಲಿಸಿದ್ದ 10 ಕಾರ್ಯಕ್ರಮಗಳಿಗೆ ಬೇಡಿಕೆಗನುಗುಣವಾಗಿ 2023-24ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225-02-794-0-05ರಡಿ ಇತರೆ ವೆಚ್ಚಕ್ಕಾಗಿ ಬಿಡುಗಡೆಯಾಗಿರುವ ಒಟ್ಟು ರೂ.2000.00 ಲಕ್ಷಗಳಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಒದಗಿಸಿರುವ ರೂ.690.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕೇಂದ್ರದಲ್ಲಿ ಬುಡಕಟ್ಟು ಸಂಸ್ಥೆಗೆ ರೂ.690.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುದಾನವು ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225-02-794-0-05ರಡಿ ಇತರೆ ವೆಚ್ಚಕ್ಕಾಗಿ ಬಿಡುಗಡೆಯಾಗಿರುವ ಒಟ್ಟು ರೂ.2000.00 ಲಕ್ಷಗಳಲ್ಲಿ ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯಗಳಿಗೆ ಸರ್ಕಾರದ ಯೋಜನೆ/ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಕಾರ್ಯಾಗಾರ. ಉದ್ಯೋಗ ಹಾಗೂ ಶಿಕ್ಷಣದ ಮಹತ್ವ ಕುರಿತು ಕಾರ್ಯಾಗಾರ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬುಡಕಟ್ಟು ಸಮುದಾಯದ ಜನಪ್ರತಿನಿಧಿಗಳಿಗೆ ಹಾಗೂ ಅರಣ್ಯ, ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ತರಬೇತಿ ನೀಡಲು ಮತ್ತು ಕೇಂದ್ರ ಸರ್ಕಾರದ ಪೋಷಣ್ ಮಾಹೆ ಅಭಿಯಾನ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಆಯೋಜಿಸಲು ದಿನಾಂಕ:12.12.2021ರ ಆದೇಶದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಿರುವುದಾಗಿ ತಿಳಿಸಿರುತ್ತಾರೆ.

ಸರ್ಕಾರದ ಯೋಜನೆ/ಕಾರ್ಯಕ್ರಮಗಳ ಸೌಲಭ್ಯಗಳನ್ನು ಪಡೆಯಲು ಅತ್ಯಗತ್ಯವಿರುವ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳನ್ನು ಪಡೆದುಕೊಳ್ಳುವ ಕುರಿತು ಒಂದು ದಿನದ ಅರಿವು ಮತ್ತು ದಾಖಲಾತಿ ನೋಂದಣಿ ಶಿಬಿರವನ್ನು ಬುಡಕಟ್ಟು ಜನರು ವಾಸಿಸುವ ಹಾಡಿಗಳಲ್ಲಿ ಆಯೋಜಿಸಬೇಕಾಗಿದ್ದು, ಸದರಿ ಶಿಬಿರದಲ್ಲಿ ಸರ್ಕಾರದ ವಿವಿಧ ಇಲಾಖೆಗಳ (ಕಂದಾಯ, ಆಧಾರ್, ಪಂಚಾಯತ್ ಮತ್ತು ಇತರೆ) ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡಗಳು ಭಾಗವಹಿಸುವುದರಿಂದ ಪ್ರತಿ ತಂಡಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುವುದರಿಂದ 2023-24ನೇ ಸಾಲಿನ ಅರಿವು ಮೂಡಿಸುವ ಕಾರ್ಯಕ್ರಮದ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಸಕಇ 60 ಎಸ್‌ಟಿಪಿ 2023,</u>**
**<u>ಬೆಂಗಳೂರು, ದಿನಾಂಕ: 27.11.2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು, ಈ ಕೇಂದ್ರದಲ್ಲಿ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225-02-794-0-05ರಡಿ ಲಭ್ಯವಿರುವ ಅನುದಾನದಲ್ಲಿ ರೂ.690.00 ಲಕ್ಷ (ಆರು ನೂರ ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಅನುಬಂಧದಲ್ಲಿ ವಿವರಿಸಿರುವಂತೆ ಕ್ರಿಯಾಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ & ಇ ಲೆಕ್ಕ ಪರಿಶೋಧನೆ-1 ಮತ್ತು [illegible] ಟಕ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಉಪ ನಿರ್ದೇಶಕರು, ಖಜಾನೆ ಗಣಕ ಶಾಲ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

*****

## ಅನುಬಂಧ

| ಕ್ರ.ಸಂ. | ಯೋಜನೆ/ಕಾರ್ಯಗಾರ ವಿವರ | ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|
| 1 | ಯೋಜನೆ/ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸಲು ಎಸ್.ಟಿ. ಜನಪ್ರತಿನಿಧಿ/ಸಮುದಾಯದವರಿಗೆ ಒಂದು ದಿನದ ಕಾರ್ಯಗಾರ (80-100 ಜನರಿಗೆ) | 175.00 |
| 2 | ಆಶ್ರಮ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರಿಗೆ "Basic Life Support" ಒಂದು ದಿನದ ಕಾರ್ಯಗಾರ (35-40 ಜನರಿಗೆ) | 120.00 |
| 3 | ನೀರು ಮತ್ತು ನೈರ್ಮಲ್ಯ ಕುರಿತು ಬುಡಕಟ್ಟು ಸಮುದಾಯದವರಿಗೆ ಅರಿವು ಮೂಡಿಸಲು (ಒಂದು ದಿನದ ಕಾರ್ಯಗಾರ) | 50.00 |
| 4 | ಕೇಂದ್ರ/ರಾಜ್ಯ ಸರ್ಕಾರದ ವಿವಿಧ ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ಯೋಜನೆಗಳ ಕುರಿತು ಅರಿವು ಮೂಡಿಸಲು (ಒಂದು ದಿನದ ಕಾರ್ಯಗಾರ) | 30.00 |
| 5 | ಕೃಷಿ ಮತ್ತು ಹೈನುಗಾರಿಕೆ ಕುರಿತು ಅರಿವು ಮೂಡಿಸಲು (ಒಂದು ದಿನದ ಕಾರ್ಯಗಾರ) | 30.00 |
| 6 | ಸ್ವಯಂ ಉದ್ಯೋಗ ಮತ್ತು ಉದ್ಯೋಗಾಧಾರಿತ ಕಾರ್ಯಕ್ರಮಗಳ ಅರಿವು (ಒಂದು ದಿನದ ಕಾರ್ಯಗಾರ) | 30.00 |
| 7 | ಸರ್ಕಾರದ ಯೋಜನೆ/ಕಾರ್ಯಕ್ರಮಗಳ ಸೌಲಭ್ಯ ಗಳನ್ನು ಪಡೆಯಲು ಆಧಾರ್ ಕಾರ್ಡ್. ರೇಷನ್ ಕಾರ್ಡ್. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳನ್ನು ಪಡೆದುಕೊಳ್ಳುವ ಕುರಿತು ಒಂದು ದಿನದ ಕಾರ್ಯಗಾರ/ದಾಖಲಾತಿ ನೋಂದಣಿ ಕಾರ್ಯ | 100.00 |
| 8 | ಬಾಲ್ಯ ವಿವಾಹ, ಮಹಿಳೆಯ ಹಕ್ಕು, ಮಾನವ ಕಳ್ಳ ಸಾಗಾಣಿಕೆ, ಬಾಲ ಕಾರ್ಮಿಕ ಪದ್ಧತಿಗಳ ಕುರಿತು ಬುಡಕಟ್ಟು ಜನಪ್ರತಿನಿಧಿ/ ಸಮುದಾಯದವರಿಗೆ ಕಾನೂನು ಅರಿವು | 50.00 |
| 9 | ಇಲಾಖೆಯ ಯೋಜನೆಗಳ ಅರಿವು ಮೂಡಿಸಲು ಬುಡಕಟ್ಟು ಜನಪ್ರತಿನಿಧಿ/ಸಮುದಾಯದವರಿಗೆ ಒಂದು ದಿನದ ಕಾರ್ಯಗಾರ | 30.00 |
| 10 | ದುಶ್ಚಟಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಕಾರ್ಯಗಾರ ಬುಡಕಟ್ಟು ಜನಪ್ರತಿನಿಧಿ/ ಸಮುದಾಯದವರಿಗೆ ಕಾನೂನು ಅರಿವು | 50.00 |
| | ಒಟ್ಟು | 690.00 |

H. [signature]
(ಎಂ.ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ರಾಜ್ಯಾದ್ಯಂತ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರದ ಅಂಗ ಸಂಸ್ಥೆಯಾದ ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು (KSMC&A) ಇವರ ಮುಖಾಂತರ ಆಯೋಜಿಸಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ಪತ್ರ ಸಂಖ್ಯೆ:ಟಿಆರ್‌ಐ/ಮೈ/ಸಿಆರ್/2023-24, ದಿನಾಂಕ:21.07.2023 ಮತ್ತು 07.09.2023.
2. ಸರ್ಕಾರದ ಆದೇಶ ಸಂಖ್ಯೆ:ಸಕಇ 60 ಎಸ್‌ಟಿಪಿ 2023, ದಿನಾಂಕ:27.11.2023.

*****

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕೇಂದ್ರದಲ್ಲಿ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಬೇಡಿಕೆಗನುಗುಣವಾಗಿ 2023-24ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ರೂ.690.00 ಲಕ್ಷಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ 2023-24ನೇ ಸಾಲಿನ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕೇಂದ್ರದಲ್ಲಿ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225-02-794-0-05ರಡಿ ಲಭ್ಯವಿರುವ ಅನುದಾನದಲ್ಲಿ ರೂ.690.00 ಲಕ್ಷಗಳ ಕ್ರಿಯಾಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ:ಸಕಇ 60 ಎಸ್‌ಟಿಪಿ 2023(1), ಬೆಂಗಳೂರು, ದಿನಾಂಕ:27.11.2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವ ಕಾರ್ಯಕ್ರಮ/ ಯೋಜನೆಗಳನ್ನು ಅನುಷ್ಠಾನಗೊಳಿಸಲು 2023-24ನೇ ಸಾಲಿನ ಕ್ರಿಯಾಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದ್ದು, ಅದರನ್ವಯ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿ ಬುಡಕಟ್ಟು ಜನರಿಗೆ ದೊರಕುವ ಸೌಲಭ್ಯಗಳು ಹಾಗೂ ಇನ್ನಿತರೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ/ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಅಂಗ ಸಂಸ್ಥೆಯಾದ ಮಾರ್ಕೆಟಿಂಗ್

ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು (KSMC&A) ಇವರ ಮುಖಾಂತರ ಆಯೋಜಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಆದೇಶಿಸಿದೆ.

ಷರತ್ತುಗಳು:-

1. ಸದರಿ ಕಾರ್ಯಕ್ರಮವನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್ ಬೆಂಗಳೂರು (KSMC&A) ರವರ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು.
2. ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಯು ಸದರಿ ಕಾರ್ಯಕ್ರಮಕ್ಕೆ 4ಜಿ ವಿನಾಯಿತಿ ಪಡೆದುಕೊಂಡಿರುವ ಬಗ್ಗೆ ಖಾತರಿ/ಖಚಿತಪಡಿಸಿಕೊಂಡು ನಂತರದಲ್ಲಿ ಅನುದಾನ ಬಿಡುಗಡೆಗೊಳಿಸತಕ್ಕದ್ದು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯವರು ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಇವರು ಕಾರ್ಯಕ್ರಮದ ಕಾರ್ಯವೈಖರಿಯ ಬಗ್ಗೆ ಮೇಲ್ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
4. 2023-24ನೇ ಸಾಲಿನ ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225- 02-794-0-05ರಡಿ ಒದಗಿಸಿಕೊಳ್ಳುವ ಅನುದಾನದಲ್ಲಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ & ಇ ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
5. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

*****

(ಕಡತ ಸಂಖ್ಯೆ: STW/SECB/STP/281/2024, ಗಣಕ ಸಂಖ್ಯೆ: 1536225)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ರಾಜ್ಯಾದ್ಯಂತ ಅರಿವು ಮೂಡಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ಏಕ ಕಡತ ಸಂಖ್ಯೆ: ಟಿಆರ್‌ಐ/ಮೈ/ಸಿಆರ್-/2024-25, ದಿನಾಂಕ:23-09-2024 ಹಾಗೂ ಪತ್ರ ದಿನಾಂಕ:23-10-2024 ಮತ್ತು 27-01-2025.

2. ಸರ್ಕಾರದ ಆದೇಶ ಸಂಖ್ಯೆ:ಸಕಇ 60 ಎಸ್.ಟಿ.ಪಿ 2023, ದಿನಾಂಕ:27-11-2023.

*****

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ: ಪವಕನಿ/ಲೆಕ್ಕಪತ್ರ/ಸಿ-ಆರ್-07/2020-21ರಲ್ಲಿ 697.50 ಲಕ್ಷಗಳನ್ನು ರಾಜ್ಯದಲ್ಲಿನ ಪರಿಶಿಷ್ಟ ಪಂಗಡಗಳ ಬುಡಕಟ್ಟು ಸಮುದಾಯಗಳಿಗೆ ಸರ್ಕಾರದ ಯೋಜನೆ/ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿಗೆ ಬಿಡುಗಡೆ ಮಾಡಿರುತ್ತಾರೆ. ಸದರಿ ಅನುದಾನದಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆಗೆ ಸಲ್ಲಿಸಿದ್ದ ಕ್ರಿಯಾಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಪತ್ರ ಸಂಖ್ಯೆ: ಸಕಇ 60 ಎಸ್.ಟಿ.ಪಿ 2023, ದಿನಾಂಕ:22-08-2023ರಲ್ಲಿ ಕೋರಿದ್ದ ಮಾಹಿತಿಗಳಿಗೆ ಸೂಕ್ತ ಸ್ಪಷ್ಟೀಕರಣ ಸಲ್ಲಿಸಲಾಗಿತ್ತು.

ಮುಂದುವರೆದು, ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅನುಮೋದಿಸಲಾದ ಕಾರ್ಯಕ್ರಮಗಳನ್ನು ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ರವರ ಮೂಲಕ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ದಿನಾಂಕ:09-08-2024 ಮತ್ತು 13-08-2024ರಂದು ನಡೆದ ಸಭೆಗಳಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರು ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯು ಅರಿವು ಮೂಡಿಸುವ ಅಥವಾ ತರಬೇತಿ ನೀಡುವ ಸಂಸ್ಥೆಯಾಗಿರುವುದಿಲ್ಲ. ಆದ್ದರಿಂದ, ಎಲ್ಲಾ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದಲೇ ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಬಿಡುಗಡೆಯಾಗಿರುವ ಅನುದಾನದಲ್ಲಿ ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯದವರಿಗೆ ಸರ್ಕಾರದ ಯೋಜನೆ / ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಆಯೋಜಿಸಬಹುದಾದ ಕಾರ್ಯಕ್ರಮಗಳ ಪರಿಷ್ಕೃತ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ

ಇತರೆ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ವತಿಯಿಂದ ಸರ್ಕಾರದ ಮಾರ್ಗಸೂಚಿಗಳು, ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: STW/SECB/STP/281/2024,**
**ಬೆಂಗಳೂರು, ದಿನಾಂಕ:20-03-2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಲೆಕ್ಕ ಶೀರ್ಷಿಕೆ:2225-02-794-0-05ರಡಿ ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಸರ್ಕಾರದ ಯೋಜನೆ/ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ವತಿಯಿಂದ ಅನುಷ್ಠಾನಗೊಳಿಸಲು ಅನುಬಂಧದಲ್ಲಿರುವಂತೆ ಒಟ್ಟು ರೂ.695.00 ಲಕ್ಷ (ಆರು ನೂರ ತೊಂಬತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳ ಪರಿಷ್ಕೃತ ಕ್ರಿಯಾಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು, ಈ ಹಿಂದೆ ಸಂಸ್ಥೆಯಿಂದ ಸರ್ಕಾರದ ಯೋಜನೆ / ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದಿಸಿ ಹೊರಡಿಸಿರುವ ಆದೇಶ ಸಂಖ್ಯೆ: ಸಕಇ 60 ಎಸ್‌ಟಿಸಿ 2023, ದಿನಾಂಕ:27-11-2023ನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಸ್ ಜ್ಯೋತಿ)
ಸರ್ಕಾರದ ಉಪ ಕಾರ್ಯದರ್ಶಿ,
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ & ಇ ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.

4. ನಿರ್ದೇಶಕರು, ರಾಜ್ಯ ಹುಜೂರು ಖಜಾನ, ಬೆಂಗಳೂರು.
5. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1. ಸನ್ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

*********

# ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು

## ರಾಜ್ಯಾದ್ಯಂತ ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯದವರಿಗೆ ವಿವಿಧ ಅರಿವು ಮೂಡಿಸುವ /ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತಾದ ಕ್ರಿಯಾಯೋಜನೆ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮ | ಅಂದಾಜು ಘಟಕ ವೆಚ್ಚ | ಒಟ್ಟು ಕಾರ್ಯಕ್ರಮಗಳು | ಒಟ್ಟು ಮೊತ್ತ |
|---|---|---|---|---|
| 1 | ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆ (KEA/CISR) ಗಳ ಸಹಯೋಗದೊಂದಿಗೆ ಪರಿಶಿಷ್ಟ ಪಂಗಡದ ಸಮುದಾಯದವರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿರುವ existing Scheme ಗಳು ಕುರಿತು ಮೌಲ್ಯಮಾಪನ (evaluation) | | | |
| | a) Education program - ಪ್ರಬುದ್ಧ ಯೋಜನೆಯ ಮೌಲ್ಯಮಾಪನ | ಚರ್ಚೆಯ ಹಂತದಲ್ಲಿರುತ್ತದೆ | | |
| | b) ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ನಗದು ಪ್ರೋತ್ಸಾಹಧನ(Prize Money) | | | |
| | c) ಸಾಮಾಜಿಕ-ಆರ್ಥಿಕಾಭಿವೃದ್ಧಿ (socio-economic schemes) - ವಿವಾಹ ಯೋಜನೆಗಳ ಮೌಲ್ಯಮಾಪನ | | | |
| | ಒಟ್ಟು | | | 50.00 |
| 2 | ಸಂಸ್ಥೆಯಿಂದ ಪ್ರಾರಂಭಗೊಂಡು ಅಪೂರ್ಣವಾಗಿರುವ ಅಧ್ಯಯನ ಕಾರ್ಯಗಳನ್ನು ಪೂರ್ಣಗೊಳಿಸುವುದು (To compete the ongoing or incompete studies in TRI) | | | |
| | a) ಕುಲಶಾಸ್ತ್ರೀಯ ಅಧ್ಯಯನಗಳು | ನಡವಳಿಯನ್ವಯ ಹಸಲರು, ಗೌಡಲು, ಸಿದ್ಧಿ ಮತ್ತು ಇರುಳಿಗ ಸಮುದಾಯಗಳನ್ನು PVTG ಪಟ್ಟಿಗೆ ಸೇರ್ಪಡೆಗೊಳಿಸುವ ಸಂಬಂಧ ಅಧ್ಯಯನ ಕಾರ್ಯವು ಚಾಲ್ತಿಯಲ್ಲಿರುತ್ತದೆ. ಇದರ ಸಂಬಂಧಿತ ವೇತನ ಮತ್ತು ಇತರ ವೆಚ್ಚ ಭರಿಸಲಾಗುತ್ತಿದೆ. | | |
| | b) ಸಾಮಾಜಿಕ-ಆರ್ಥಿಕ ಸ್ಥಿತಿ ಅಧ್ಯಯನ | | | |
| | c) ಮೌಲ್ಯಮಾಪನ | | | |
| | ಒಟ್ಟು | | | 50.00 |
| 3 | ಇತರೆ ರಾಜ್ಯ/ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ Study tour/Visit to Other State/Institutions | | | |
| | a) ಇಲಾಖಾ ಅಧಿಕಾರಿಗಳ ಅಧ್ಯಯನ ಪ್ರವಾಸ - ಇತರೆ ರಾಜ್ಯಗಳ ಬುಡಕಟ್ಟು ಸಂಶೋಧನಾ ಸಂಸ್ಥೆ ಅಥವಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಿಗೆ | ನವೆಂಬರ್ 2025ರ ಮಾಹೆಯಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿದ್ದು, ಪಾವತಿ ಬಾಕಿ ಇರುತ್ತದೆ | | |
| | b) ಬುಡಕಟ್ಟು ಸಮುದಾಯದವರ ಕಲೆ/ಸಂಸ್ಕೃತಿಗಳ ವಿನಿಮಯಕ್ಕಾಗಿ ಪ್ರವಾಸ - Exchange visit of Tribal representatives | ಪೂರ್ಣಗೊಂಡಿರುತ್ತದೆ. ಪಾವತಿ ಬಾಕಿ ಇರುತ್ತದೆ | | |
| | c) LAMPS ಪದಾಧಿಕಾರಿ/ಸದಸ್ಯರಿಗೆ ಅಧ್ಯಯನ ಪ್ರವಾಸ | ಚರ್ಚೆಯ ಹಂತದಲ್ಲಿರುತ್ತದೆ | | |
| | ಒಟ್ಟು | | | 60.00 |

| ಕ್ರ. ಸಂ. | ಕಾರ್ಯಕ್ರಮ | ಅಂದಾಜು ಘಟಕ ವೆಚ್ಚ | ಒಟ್ಟು ಕಾರ್ಯಕ್ರಮಗಳು | ಒಟ್ಟು ಮೊತ್ತ |
|---|---|---|---|---|
| 4 | ತರಬೇತಿ (Training) : | | | |
| | a) NIMHANS ರವರ ಮೂಲಕ ಇಲಾಖಾ ಅಧಿಕಾರಿ/ಶಿಕ್ಷಕರು/ವಾರ್ಡನ್ ಗಳಿಗೆ - ಮಾನಸಿಕ ಆರೋಗ್ಯ ಸಂವರ್ಧನೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಾಗಿ ಕೆಲವ ನಿರ್ವಹಿಸಲು ತರಬೇತಿ (Training for trainee by NIMHANS) | NIMHANS ರವರ ಮೂಲಕ ಡಿಸೆಂಬರ್ 25 ಹಾಗೂ ಫೆಬ್ರುವರಿ 26 ರ ಮಾಹೆಯಲ್ಲಿ ತರಬೇತಿಗಾಗಿ | | |
| | b) FRA (ಅರಣ್ಯ ಹಕ್ಕು ಕಾಯ್ದೆ), ಕಿರು ಅರಣ್ಯ ಉತ್ಪನ್ನ( MFP), ಮಾರ್ಕೆಟಿಂಗ್ ಇತ್ಯಾದಿಗಳ ಕುರಿತು ತರಬೇತಿ ಕಾರ್ಯಕ್ರಮ | ತರಬೇತಿಗಾಗಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. (ಡಿಸೆಂಬರ್ 25- ಚಿಕ್ಕಮಗಳೂರು ಜಿಲ್ಲೆ) | | |
| | | | | 40.00 |
| 5 | ರಾಜ್ಯದ ಸಣ್ಣ ಸಣ್ಣ ಪರಿಶಿಷ್ಟ ಪಂಗಡದ ಸಮುದಾಯಗಳ ಕುರಿತು ಸಾಕ್ಷ್ಯಾಚಿತ್ರಗಳ ತಯಾರಿಕೆ (Documentary about ST communities) | | | |
| | a) 5000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಪರಿಶಿಷ್ಟ ಪಂಗಡದ ಸಮುದಾಯಗಳು | 1. ಇಲಾಖಾ ಸಾಕ್ಷ್ಯಾಚಿತ್ರ ಸಂಬಂಧಿತ ರೂ.3.80 ಲಕ್ಷ ಪಾವತಿಯಾಗಿರುತ್ತದೆ<br>2. KSTRI ಕುರಿತ ಸಾಕ್ಷ್ಯಾಚಿತ್ರ ಸಂಬಂಧಿತ ಕಾರ್ಯ ಚಾಲ್ತಿಯಲ್ಲಿದ್ದು, ಯಾವುದೇ ಪಾವತಿ ಆಗಿರುವುದಿಲ್ಲ | | |
| | b) ಅರಣ್ಯಾಧಾರಿತ-ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳು | | | |
| | ಒಟ್ಟು | | | 40.00 |
| 6 | ಬುಡಕಟ್ಟು ಸಮುದಾಯದವರಿಗೆ ಹಾಗೂ ಇಲಾಖಾ ಆಶ್ರಮಶಾಲಾ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸುವ ಸಲುವಾಗಿ | | | |
| | a) Health Check up and Follow up treatment to the needed (at tribal hadies) | ಡಿಸೆಂಬರ್ 15 ಮತ್ತು 16 | | |
| | ಒಟ್ಟು | | | 75.00 |
| 7 | For ongoing Survey taken through Tribal Study Centre - A Unit of KSTRI | | | |
| | a) ತಳಮಟ್ಟದ ಅಧ್ಯಯನ/ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸುವುದಕ್ಕಾಗಿ - (ವೇತನ ಮತ್ತು ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು) | ಚರ್ಚೆ<br>Digital ಸಮೀಕ್ಷೆ ಮಾಡಬೇಕೆಂದು ಇಲಾಖಾ ವತಿಯಿಂದ APP Develop ಆಗಿದ್ದು ಶೀಘ್ರದಲ್ಲಿ ಚಾಲನೆಗೆ ಬರುತ್ತದೆ | | |
| | ಒಟ್ಟು | | | 50.00 |

| ಕ್ರ. ಸಂ. | ಕಾರ್ಯಕ್ರಮ | ಅಂದಾಜು ಘಟಕ ವೆಚ್ಚ | ಒಟ್ಟು ಕಾರ್ಯಕ್ರಮಗಳು | ಒಟ್ಟು ಮೊತ್ತ |
|---|---|---|---|---|
| 8 | ಸರ್ಕಾರದ ಕಾರ್ಯಕ್ರಮಗಳು, ಮಾರ್ಗಸೂಚಿಗಳು, ಸೌಲಭ್ಯ ಪಡೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳು ಮತ್ತು ಇತರೆ ಮಾಹಿತಿಯನ್ನು ಒಳಗೊಂಡ ಪುಸ್ತಕಗಳ ಮುದ್ರಣ/ಪ್ರಕಟಣೆ | | | 50.00 |
| 9 | DPR for Tribal Museum (ಬುಡಕಟ್ಟು ವಸ್ತು ಸಂಗ್ರಹಾಲಯ ಯೋಜನೆಯ ವಿವರವಾದ ವರದಿ) ಸಿದ್ಧಪಡಿಸುವುದಕ್ಕಾಗಿ **(In Progress)** | | | 50.00 |
| 10 | "BASIC LIFE SUPPORT" ಕುರಿತು ಆಶ್ರಮಶಾಲೆ ಶಿಕ್ಷಕರು/ನಿಲಯ ಮೇಲ್ವಿಚಾರಕರಿಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮ **(ಫೆಬ್ರುವರಿ 26)** | | | 20.00 |
| 11 | ಸ್ವಯಂ ಉದ್ಯೋಗ/ self employment ಮತ್ತು ಉದ್ಯೋಗಾಧಾರಿತ ಕಾರ್ಯಕ್ರಮಗಳ ಕುರಿತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ ಅರಿವು ಮೂಡಿಸುವ/ತರಬೇತಿ ನೀಡುವ ಕಾರ್ಯಕ್ರಮ | ಫೆಬ್ರುವರಿ 2026 | | 40.00 |
| 12 | Village Profile Creation : ಗ್ರಾಮದ ಮಾದರಿ ವಿವರ ಸಿದ್ಧಪಡಿಸುವಿಕೆ- ಸಚಿತ್ರ ಸಹಿತ ವರದಿ ತಯಾರಿಕೆ | | | |
| | a) ಭೌಗೋಳಿಕ ವಿವರ (Geographical details) : ನಕ್ಷೆ, ವಿಸ್ತೀರ್ಣದೊಂದಿಗೆ ಪರಿಸರದ ಕುರಿತು ವಿವರ | ಇಲಾಖೆ ಬುಡಕಟ್ಟು ಮಿತ್ರ App ಸಿದ್ಧವಾಗಿದ್ದು, ಬಿಡುಗಡೆಗೆ ಕಾಯ್ದಿರಿಸಿದೆ | | |
| | b) ಸಂಪನ್ಮೂಲಗಳ ಲಭ್ಯತೆ (Resources Availability) : ಅರಣ್ಯ ಪ್ರದೇಶ, ಕುಡಿಯುವ ನೀರು, ಕೃಷಿ ಭೂಮಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಶಾಲೆ ಇತ್ಯಾದಿ | | | |
| | c) ವಾಸಿಸುತ್ತಿರುವ ಸಮುದಾಯ/ಜನಾಂಗದವರ ವಿವರ : ಜನಸಂಖ್ಯೆ, ಉದ್ಯೋಗ, ಕೌಟುಂಬಿಕ ಆದಾಯದ ಮೂಲಗಳು, ವಸತಿ ಸೌಲಭ್ಯ ಹೊಂದಿರುವವರು, ವಸತಿ ರಹಿತರು ಇತ್ಯಾದಿ | | | |
| | d) ಅಗತ್ಯ ಮೂಲಭೂತ ಸರ್ಕಾರಿ ದಾಖಲೆಗಳನ್ನು ಹೊಂದಿರುವವರು, ಹೊಂದಿಲ್ಲದಿರುವವರು, | | | |
| | d) ಹಾಡಿ/ಗ್ರಾಮದ ಜನರು ಎದುರಿಸುತ್ತಿರುವ ಸಮಸ್ಯೆಗಳು, ಬೇಡಿಕೆಗಳು | | | |
| | e) ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳು, ಮಾದರಿ ಹಾಡಿ/ಗ್ರಾಮವನ್ನಾಗಿ ಮಾಡಲು ಕೈಗೊಳ್ಳಬಹುದಾದ ಕ್ರಮ- ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮಗಳು | | | |
| | ಒಟ್ಟು | | | 50.00 |
| 13 | ಬುಡಕಟ್ಟು Tribal ಸಂತೆ/ಮೇಳ ಇತ್ಯಾದಿ ಆಯೋಜನೆಗಾಗಿ **(ಡಿಸೆಂಬರ್ 25)** | | | 45.00 |
| 14 | ಆಡಳಿತಾತ್ಮಕ ವೆಚ್ಚ, E-Office ಅನುಷ್ಠಾನ, ಮುದ್ರಣ ವೆಚ್ಚ ಮತ್ತು ಇತರೆ ವೆಚ್ಚಗಳಿಗಾಗಿ **(In Progress)** | | | 25.00 |

| ಕ್ರ. ಸಂ. | ಕಾರ್ಯಕ್ರಮ | ಅಂದಾಜು ಘಟಕ ವೆಚ್ಚ | ಒಟ್ಟು ಕಾರ್ಯಕ್ರಮಗಳು | ಒಟ್ಟು ಮೊತ್ತ |
|---|---|---|---|---|
| 15 | Project Management Unit (ಯೋಜನೆ ನಿರ್ವಹಣೆ ಘಟಕ) to assist KSTRI in formulating projects and budget **(In Progress)** | | | 50.00 |
| | ಅಂತೂ ಒಟ್ಟು | | | **695.00** |

(ಒಟ್ಟು ಆರು ನೂರ ತೊಂಭತ್ತೈದು ಲಕ್ಷಗಳು ಮಾತ್ರ)